**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಉಡುಪಿ ಇವರ ನ್ಯಾಯಾಲಯದಲ್ಲಿ**

**ಸಿ.ಸಿ ಸಂಖ್ಯೆ:** 1416/2022 **ಸಿ. ಡಬ್ಲ್ಯೂ:** 2 **ಪಿ ಡಬ್ಲ್ಯೂ: 2**

**ಹೆಸರು** : ರೆಹಮಾನ್

**ತಂದೆಯ ಹೆಸರು** : ಸುಲೆಮಾನ್

**ವಯಸ್ಸು** : 34 ವರ್ಷ

**ಉದ್ಯೋಗ** : ಆಟೋ ಚಾಲಕ

**ವಾಸ ಸ್ಥಳ** : ದೊಡ್ಡಣಗುಡ್ಡೆ

ದಿ: 16-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುವುದಿಲ್ಲ. ಮೃತ ಅಬುಬಕ್ಕರ್ ಸಿದ್ದಿಕ್ ರವರ ಪರಿಚಯ ಇದೆ. ಸದರಿಯವರು ಒಂದು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಸದರಿ ಅಪಘಾತ ಯಾರ ತಪ್ಪಿನಿಂದ ಯಾವ ವಾಹನದಿಂದ ಮತ್ತು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ತಕ್ಷೀರು ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ಸಾಕ್ಷಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ4 ಮತ್ತು ನಿಪಿ5 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ಯಾವ ಸಂದರ್ಭದಲ್ಲಿ ತೆಗೆದಿರುತ್ತಾರೆ ಎಂದು ನೆನಪಿಲ್ಲ. ನಾನು ಪೊಲೀಸರಿಗೆ ಯಾವುದೇ ಕೃತ್ಯ ಸ್ಥಳವನ್ನು ತೋರಿಸಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ತಕ್ಷೀರು ಸ್ಥಳ ಮಹಜರನ್ನು ಮಾಡಿರುವುದಿಲ್ಲ ಮತ್ತು ಯಾವುದೇ ನಕಾಶೆಯನ್ನು ಕೃತ್ಯ ಸ್ಥಳದಲ್ಲಿ ತಯಾರಿಸಿರುವುದಿಲ್ಲ. ಸದರಿ ನಿಪಿ2 ಮಹಜರು ಮತ್ತು ನಿಪಿ3 ನಕಾಶೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ನಿಪಿ2 ಮತ್ತು ನಿಪಿ3 ರಲ್ಲಿ ಸಂಗತಿಗಳು ನನಗೆ ತಿಳಿದಿರುವುದಿಲ್ಲ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಸ್ವತ್ತು ಸ್ವಾಧೀನತಾ ಮಹಜರ್ ಆಗಿದ್ದು ಅದನ್ನು ನಿಪಿ6 ಎಂದು ಸಾಕ್ಷಿಯ ಸಹಿಯನ್ನು ನಿಪಿ6 ಎ ಎಂದು ಗುರುತಿಸಲಾಯಿತು. ಸಾಕ್ಷಿ ಭಾವಚಿತ್ರದಲ್ಲಿರುವ ವಾಹನವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ7 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ಜಪ್ತಿ ಮಾಡಿ ಸ್ವಾಧೀನಕ್ಕೆ ಪಡೆದುಕೊಂಡಿರುವುದಿಲ್ಲ. ಸದರಿ ನಿಪಿ6 ರಲ್ಲಿರುವ ಸಂಗತಿಗಳು ನನಗೆ ತಿಳಿದಿರುವುದಿಲ್ಲ ಮತ್ತು ಸದರಿ ದಾಖಲೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿ ಭಾವಚಿತ್ರದಲ್ಲಿರುವ ಅಪಘಾತಕ್ಕೊಳಪಟ್ಟ ವಾಹನವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ8 ರಿಂದ ನಿಪಿ11 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ12 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸಿರುವುದಿಲ್ಲ. ಸಾಕ್ಷಿಯು ಭಾವಚಿತ್ರದಲ್ಲಿರುವ ಅಪಘಾತಪಡಿಸಿದ ವಾಹನವನ್ನು ನೋಡಿ ಗುರುತಿಸಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**

**ಪಾಟಿ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿನಾಂಕ 04-03-2022 ರಂದು ರಾತ್ರಿ 09-30 ಗಂಟೆಗೆ ನಾನು ಮೃತ ಅಬುಬಕ್ಕರ್ ಸಿದ್ದಿಕ್ ರವರ ಮೋಟಾರ್ ಸೈಕಲಿನ ಹಿಂದೆ ನನ್ನ ಆಟೋ ರಿಕ್ಷಾವನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾಗ ಪುತ್ತೂರು ಗ್ರಾಮದ ಅಂಬಾಗಿಲು ಜಂಕ್ಷನ್ - ಗುಂಡಿಬೈಲು ಸಾರ್ವಜನಿಕ ಡಾಮಾರು ರಸ್ತೆಯ ಅಂಬಾಗಿಲು ಜಂಕ್ಷನ್ ಎಂಬಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಯು ಆತನ ಬಾಬ್ತು ಮಾಲಕತ್ವದ ಕೆಎ.20.ಡಬ್ಲ್ಯೂ.1163 ನೇ ನಂಬ್ರದ ಕೆಂಪು - ಕಪ್ಪು ಬಣ್ಣದ ಹೀರೋ ಹೋಂಡ ಪ್ಯಾಷನ್ ಪ್ಲಸ್ ಮೋಟಾರು ಸೈಕಲ್‌ನಲ್ಲಿ ಆತನ ಹೆಂಡತಿಯಾದ ಚಾಸಾ 4 ನೇಯವರನ್ನು ಮತ್ತು ಮಗು ಉತ್ತಮ್ ನಾಯ್ಕ ರವರನ್ನು ಸಹ ಸವಾರರನ್ನಾಗಿ ಕುಳ್ಳಿರಿಸಿಕೊಂಡು ಅಂಬಾಗಿಲು ಜಂಕ್ಷನ್ ಕಡೆಯಿಂದ ಗುಂಡಿಬೈಲು ಕಡೆಗೆ ವಾಹನಗಳು ಸಂಚರಿಸುವ ಏಕ ಮುಖ ರಸ್ತೆಯ ವಿರುದ್ದ ದಿಕ್ಕಿನಲ್ಲಿ ಮೋಟಾರು ಸೈಕಲನ್ನು ದುಡುಕು ಹಾಗೂ ನಿರ್ಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ರಸ್ತೆಯ ಮಧ್ಯದಲ್ಲಿ ಚಲಾಯಿಸಿ, ರಾಹೆ.66 ರಲ್ಲಿ ಸಂತೆಕಟ್ಟೆ ಜಂಕ್ಷನ್ ಕಡೆಯಿಂದ ಅಂಬಾಗಿಲು ಜಂಕ್ಷನ್ ಕಡೆಗೆ

ಅಬೂಬಕ್ಕರ್ ಸಿದ್ದಿಕ್ ಎಂಬವರು ಸವಾರಿ ಮಾಡಿಕೊಂಡು ಬರುತ್ತಿದ್ದ ಚಾಸಾ 14 ನೇಯವರ ಬಾಬ್ತು ಮಾಲಕತ್ವದ ನೀಲಿ - ಕಪ್ಪು ಬಣ್ಣದ ಬಜಾಜ್ ಪಲ್ಸರ್ ಮೋಟಾರು ಸೈಕಲ್ ನಂಬ್ರ ಕೆ.ಎ.20.ಇ.ಸಿ.7016 ನೇದಕ್ಕೆ ಮುಖಾಮುಖಿ ಢಿಕ್ಕಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಢಿಕ್ಕಿ ಹೊಡೆದ ಪರಿಣಾಮ ಎರಡೂ ಮೋಟಾರು ಸೈಕಲ್ ಸವಾರರು ಮತ್ತು ಸಹಸವಾರರೆಲ್ಲರೂ ಮೋಟಾರು ಸೈಕಲ್ ಸಮೇತ ರಸ್ತೆಗೆ ಬಿದ್ದು, ಎರಡೂ ಮೋಟಾರು ಸೈಕಲ್‌ಗಳ ಮುಂಭಾಗ ಸಂಪೂರ್ಣ ಜಖಂಗೊಂಡಿರುತ್ತದೆ ಮತ್ತು ಅಬೂಬಕ್ಕರ್ ಸಿದ್ದಿಕ್‌ರವರ ತಲೆ ಹಿಂಬದಿಗೆ ಮತ್ತು ದೇಹದ ಇತರ ಭಾಗಗಳಿಗೆ ತೀವ್ರ ರಕ್ತಗಾಯಗೊಂಡು ಪ್ರಜ್ಞಾಹೀನಗೊಂಡಿದ್ದು, ಸಹಸವಾರೆ ಚಾಸಾ 4 ನೇ ಯವರ ತಲೆಗೆ ಮತ್ತು ಹಣೆಗೆ ಮತ್ತು ಗಡ್ಡಕ್ಕೆ ತೀವ್ರ ಮೂಳೆಮುರಿತದ ಗಾಯವಾಗಿದ್ದು, ಮತ್ತು ಅವರ ಮಗು ಉತ್ತಮ್ ನಾಯ್ಕ ರವರ ತಲೆಯ ಎಡಬದಿಗೆ ಮತ್ತು ಬಲ ಕೈಯ ಭುಜಕ್ಕೆ ಸಾದಾರಣ ಸ್ವರೂಪದ ಗಾಯ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಗಾಯಗೊಂಡ ನಾಲ್ಕೂ ಜನರನ್ನು ಸಾರ್ವಜನಿಕರು ಚಿಕಿತ್ಸೆಗಾಗಿ ಹೈಟೆಕ್ ಮೆಡಿಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನಾಲ್ಕೂ ಜನರಿಗೂ ವೈದ್ಯರು ಪ್ರಥಮ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಬಳಿಕ ಅಬೂಬಕ್ಕರ್ ಸಿದ್ದಿಕ್ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಅಬುಬಕ್ಕರ್ ಸಿದ್ದಿಕ್ ಸಂಬಂಧಿಕರು ಸದರಿಯವರನ್ನು ಹೆಚ್ಚಿನ ಚಿಕಿತ್ಸೆಗೆ ಆದರ್ಶ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಮುಂಜಾನೆ 2-25 ಗಂಟೆಗೆ ಮೃತಪಟ್ಟಿರುತ್ತಾರೆ ಎಂದರೆ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ಅಪಘಾತವು ನ್ಯಾಯಾಲಯದ ಮುಂದಿರುವ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ದಿಃ 05-03-2022 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು ನಾನು ಕೃತ್ಯ ಸ್ಥಳ ತೋರಿಸಿ ಕೊಟ್ಟಂತೆ ನನ್ನ , ಚಾಸಾ5 ಮತ್ತು ಚಾಸಾ6 ರವರ ಸಮಕ್ಷಮ ನಿಪಿ2 ರಂತೆ ಬೆಳಿಗ್ಗೆ 11 ರಿಂದ 12 ಗಂಟೆಯ ತನಕ ತಕ್ಷೀರು ಸ್ಥಳ ಮಹಜರನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ಮಹಜರು ಕಾಲದಲ್ಲಿ ಪೊಲೀಸರು ನನ್ನ, ಚಾಸಾ5 ಮತ್ತು ಚಾಸಾ6 ರವರ ಸಮಕ್ಷಮ ನಿಪಿ3 ರಂತೆ ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಪಿ2 ಮಹಜರು ಮತ್ತು ನಿಪಿ3 ನಕಾಶೆಗೆ ಓದಿ ತಿಳಿದುಕೊಂಡು ಕೃತ್ಯ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಅದೇ ದಿನ ಅಪಘಾತಕ್ಕೊಳಪಟ್ಟ ಮೋಟಾರು ಸೈಕಲ್ ಸಂಖ್ಯೆ ಕೆ.ಎ.20.ಇ.ಸಿ.7014 ಮತ್ತು ಅಪಘಾತಪಡಿಸಿದ ಮೋಟಾರು ಸೈಕಲ್ ಸಂಖ್ಯೆ ಕೆಎ 20 ಡಬ್ಲ್ಯೂ 1163 ನೇ ನಂಬ್ರದ ಮೋಟಾರು ಸೈಕಲುಗಳನ್ನು ಪೊಲೀಸರು ಠಾಣೆಗೆ ತಂದು ಇಟ್ಟಿದ್ದು ಅದನ್ನು ನಾನು ತೋರಿಸಿ ಕೊಟ್ಟಂತೆ ಅದನ್ನು ನನ್ನ ಮತ್ತು ಚಾಸಾ7 ರವರ ಸಮಕ್ಷಮ ಮಧ್ಯಾಹ್ನ 12-30 ಗಂಟೆಯಿಂದ 1 ಗಂಟೆಯ ತನಕ ನಿಪಿ6 ರಂತೆ ಜಪ್ತಿ ಮಾಡಿ ಸ್ವಾಧೀನಕ್ಕೆ ಪಡೆದುಕೊಂಡು ಸ್ವತ್ತು ಸ್ವಾಧೀನತಾ ಮಹಜರನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ6 ನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮಹಜರು ಕಾಲದಲ್ಲಿ ನಾನು ಭಾವಚಿತ್ರದಲ್ಲಿರುವ ಅಪಘಾತಪಡಿಸಿದ ವಾಹನವನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

ಈಗ ನನಗೆ ಓದಿ ಹೇಳಿದಂತೆ ದಿಃ 05-03-2022 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪಿಕೊಳ್ಳದ ಹೇಳಿಕೆಯನ್ನು ನಿಪಿ13 ಎಂದು ಗುರುತಿಸಲಾಯಿತು.

ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿದ್ದರೂ ಸಹ, ನಿಪಿ13 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಮತ್ತು ಪೊಲೀಸರು ನನ್ನ ಸಮಕ್ಷಮ ನಿಪಿ2 ರಂತೆ ಮಹಜರು, ನಿಪಿ3 ರಂತೆ ನಕಾಶೆ ಮತ್ತು ನಿಪಿ6 ರಂತೆ ಸ್ವತ್ತು ಸ್ವಾಧೀನತಾ ಮಹಜರನ್ನು ತಯಾರಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಾದ ಶ್ರೀ ಎ ಎಸ್ ಎಂ ರವರಿಂದಃ ಪಾಟಿ ಸವಾಲು ಏನೂ ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು. )

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ. ಎಫ್. ಸಿ., ಉಡುಪಿ.**